# ಕರ್ನಾಟಕ ರಾಜ್ಯ ಔಖಾಫ್ ಮಂಡಳಿ

"ದಾರುಲ್ ಔಖಾಫ್" ನಂ.6, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052
ದೂರವಾಣಿ:080-22264 594/22264 595// ಫ್ಯಾಕ್ಸ್:080-22255 663
ವೆಬ್‌ಸೈಟ್:www.karwakf.org//ಇ-ಮೇಲ್:info@karwakf.org

ಸಂಖ್ಯೆ:KSBW/SOS/5/2017-18, ದಿನಾಂಕ:08-12-2017

## ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯದಲ್ಲಿನ ಖಬರಸ್ಥಾನ್‌ಗಳಲ್ಲಿರುವ ಪ್ರದೇಶವನ್ನು ಯೋಜನಾಬದ್ಧವಾಗಿ ಸದ್ಬಳಕೆ ಮಾಡುವ ಕುರಿತು.

* * * * *

ರಾಜ್ಯದಲ್ಲಿ ಐದು ಸಾವಿರಕ್ಕೂ ಮೇಲ್ಪಟ್ಟು ಖಬರಸ್ಥಾನ್‌ಗಳು ನೋಂದಾಯಿಸಿ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯಪತ್ರದಲ್ಲೂ ಸಹ ಪ್ರಕಟಿಸಲಾಗಿರುತ್ತದೆ. ನಮ್ಮ ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಸಮತೋಲನ ಇರುವುದು ಸಹಜವಾಗಿರುತ್ತದೆ. ಆದರೆ ಖಬರಸ್ಥಾನ್‌ಗಳ ಮೇಲ್ನೋಟದಲ್ಲಿ ಗೋರಿಗಳಲ್ಲಿ ಅಸಮತೋಲನ ಎದ್ದು ಕಾಣುವುದನ್ನು ಸರಿಪಡಿಸಿ ಸಮಾನತೆಯ ನೋಟವನ್ನು ತರುವ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಬಹುದಾಗಿರುತ್ತದೆ. ಖಬರಸ್ಥಾನಗಳ ನಿರ್ವಹಣೆ ಕಾರ್ಯದಲ್ಲಿ ಶರಿಯತ್‌ಗೆ ವಿರುದ್ಧವಾದ ಅನೇಕ ಚಟುವಟಿಕೆಗಳು ನಡೆಯುತ್ತಿರುವುದನ್ನು ಗಮನಿಸಿ ಇದನ್ನು ಸಮರ್ಪಕ ನಿರ್ವಹಣೆಗೆ ಶ್ರಮಿಸುವ ಅವಶ್ಯಕತೆ ಇರುವುದರಿಂದ ಈ ಸುತ್ತೋಲೆ ನೀಡಲಾಗಿದೆ.

ಈ ಖಬರಸ್ಥಾನ್‌ಗಳ ಪ್ರದೇಶಗಳು ಅನಧಿಕೃತ ಒತ್ತುವರಿದಾರರಿಗೆ ಸಹಜವಾಗಿ ತುತ್ತಾಗುತ್ತಿರುವುದು ಗಮನಿಸಲಾಗಿದೆ. ವಕ್ಫ್ ಸಂಸ್ಥೆಗಳು ಅವರ ಆದಾಯದಿಂದ ಹಾಗೂ ರಾಜ್ಯ ಸರ್ಕಾರದಿಂದ ಮಂಜೂರಾತಿ ನೀಡಲಾಗುತ್ತಿರುವ ಅನುದಾನಗಳಿಂದ ಅವುಗಳ ಸಂರಕ್ಷಣೆ ಮಾಡಲಾಗುತ್ತಿದ್ದರು ಸಹ ಸಮರ್ಪಕವಾಗಿ ಈ ಜಮೀನುಗಳನ್ನು ಸಂರಕ್ಷಣೆ ಮತ್ತು ನಿರ್ವಾಹಣೆ ಮಾಡುವುದು ಕಷ್ಟದಾಯಕವಾಗುತ್ತಿದೆ. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಇದ್ದ ಸರ್ಕಾರಿ ಜಮೀನುಗಳು ಈಗ ಲಭ್ಯವಿರುವುದಿಲ್ಲ. ಸಾರ್ವಜನಿಕ ಉದ್ದೇಶಗಳಿಗೆ ಸರಳವಾಗಿ ಮಂಜೂರಾತಿ ನೀಡುವುದು ಸಾಧ್ಯವಾಗುತ್ತಿರುವುದಿಲ್ಲ. ಖಾಸಗಿ ಜಮೀನುಗಳ ಖರೀದಿಯಿಂದ ಮಂಜೂರಾತಿ ನೀಡುವ ಯೋಜನೆಯು ಸಹ ಫಲದಾಯಕವಾಗಿರುವುದಿಲ್ಲ. ಜನಸಂಖ್ಯೆಯು ಕ್ರಮೇಣ ಹೆಚ್ಚುತ್ತಿದ್ದು ಅದರ ಅನುಗುಣವಾಗಿ ಖಬರಸ್ಥಾನ್ ಜಮೀನುಗಳನ್ನು ಅರ್ಜಿಸಿ ನಿರ್ವಹಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಎಲ್ಲಾ ವಕ್ಫ್ ಸಂಸ್ಥೆಗಳ ಮುತವಲ್ಲಿ ಹಾಗೂ ವ್ಯವಸ್ಥಾಪನ ಸಮಿತಿಯವರು ಈ ಕೆಳಕಂಡಂತೆ ಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ಸೂಚಿಸಿದೆ:

1) ಹಾಲಿ ಇರುವ ಖಬರಸ್ಥಾನ್ ಜಮೀನುಗಳಿಗೆ ತಹಸೀಲ್ದಾರರಿಂದ ಹದ್‌ಬಸ್ತು ಗುರ್ತಿಸಿಕೊಂಡು ಸರಹದ್ದಿನಲ್ಲಿ ಕಲ್ಲುಗಳನ್ನು ನೆಟ್ಟಿ ಹಸಿರು ಬಣ್ಣದ ಲೇಪವನ್ನು ನೀಡಿ ಸಂರಕ್ಷಿಸುವುದು.
2) ಪ್ರಮುಖ ಜಾಗದಲ್ಲಿ ಖಬರಸ್ಥಾನ್ ನಿರ್ವಹಿಸಲಾಗುತ್ತಿರುವ ವಕ್ಫ್ ಸಂಸ್ಥೆಯ ಹೆಸರು ಮತ್ತು ವಕ್ಫ್ ಆಸ್ತಿಯನ್ನು ದುರ್ಬಳಕೆಯಾದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದೆಂಬ ಎಚ್ಚರಿಕೆಯ ಸೂಚನೆ ನೀಡತಕ್ಕದ್ದು.
3) ಖಬರಸ್ಥಾನ್ ಜಮೀನುಗಳಲ್ಲಿ ಮುಸಲ್ಮಾನರು ಶವಸಂಸ್ಕಾರವನ್ನು ಲಭ್ಯವಿರುವ ಹಿಂದಿನ ಖಾಲಿ ಜಾಗವನ್ನು ಉಪಯೋಗಿಸಿ ಮುಂದಿನ ಭಾಗವನ್ನು ಉಳಿಸಿಕೊಳ್ಳತಕ್ಕದ್ದು.
4) ಪ್ರತಿ ಶವಕ್ಕೆ ಅಗತ್ಯವಾಗುವ ಸ್ಥಳವನ್ನು ಮಾತ್ರ ಉಪಯೋಗಿಸಬೇಕೇ ಹೊರತು ಎರಡು ಗೋರಿಗಳ ಮಧ್ಯದಲ್ಲಿ ಕನಿಷ್ಟ ಸ್ಥಳ ಮಾತ್ರ ಬಿಡತಕ್ಕದ್ದು.
5) ವಕ್ಫ್‌ಗೆ ಸೇರಿದ ಎಲ್ಲಾ ಖಬರಸ್ಥಾನ್‌ಗಳಲ್ಲಿ ಮುಸ್ಲಿಂ ಸಮಾಜದ ಎಲ್ಲಾ ಮಸ್ಲಕ್‌ನವರಿಗೆ ದಫನ್ ಮಾಡುವ ಅವಕಾಶ ಕಲ್ಪಿಸುವುದಲ್ಲದೆ ಖಬರಸ್ಥಾನ್‌ಗಳಲ್ಲಿ ಯಾವುದೇ ಕುಟುಂಬ ಅಥವಾ ಸಮಾಜದ ವೈಶಿಷ್ಟ ವ್ಯಕ್ತಿಗಳಿಗೆ ಪ್ರತ್ಯೇಕ ಸ್ಥಳದ ಅವಕಾಶ ಮತ್ತು ವಿನ್ಯಾಸದ ಅವಕಾಶ ಕಲ್ಪಿಸಬಾರದು.

ಪುಟ...2/-